ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:13.05.2019 ರಂದು ಅಪರಾಹ್ನ:4:30 ಗಂಟೆಗೆ ಇಲಾಖಾ ಸಭಾ ಕೊಠಡಿಯಲ್ಲಿ ಜರುಗಿದ ತಾಂತ್ರಿಕ ಸಲಹಾ ಸಮಿತಿ(**TAP**) ಸಭೆಯ ನಡವಳಿಗಳು.

**ಸಭೆಗೆ ಹಾಜರಾದ ಅಧಿಕಾರಿ/ಸಿಬ್ಬಂದಿಗಳು(ಶ್ರೀ/ಶ್ರೀಮತಿ):**

1. ಎಲ್.ಕೆ.ಅತೀಕ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಉಮಾ ಮಹದೇವನ್, ಭಾ.ಆ.ಸೇ, ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
3. ಎಸ್.ಎಂ.ಜುಲ್ಫಿಖಾರ್‌ಉಲ್ಲಾ, ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
4. ಎಸ್.ಎಂ.ಜುಲ್ಫಿಖಾರ್‌ಉಲ್ಲಾ, ನಿರ್ದೇಶಕರು(ಪಂ.ರಾಜ್-2), ಗ್ರಾಅಪ ಇಲಾಖೆ, ಬೆಂಗಳೂರು.
5. ವೇಣುಗೋಪಾಲ್, ವಿಜ್ಞಾನಿ, D.R.D.O.
6. ಎಸ್. ರಾಮನಾಥನ್, ವಿಜ್ಞಾನಿ, ISRO Satellite Centre.
7. ಕೆ. ಗುರುರಾಜರಾವ್, ನೋಡಲ್ ಅಧಿಕಾರಿ, ಯೋಜನಾ ಇಲಾಖೆ, ಬೆಂಗಳೂರು.
8. ವಿದ್ಯಾ H.Pai, S.O, (exp-6), ನೋಡಲ್ ಅಧಿಕಾರಿ, ಆರ್ಥಿಕ ಇಲಾಖೆ.
9. ಜಿ.ಕೆ.ಸುತಾರ್, ಪ್ರೊಜೆಕ್ಟ್ ಡೈರೆಕ್ಟರ್, S.D.C, ಸಿಆಸು (ಇ-ಆಡಳಿತ) ಇಲಾಖೆ.
10. ಡಾ|| ಜಿ.ಎಸ್. ಗಣೇಶ್ ಪ್ರಸಾದ್, ಬೋಧಕರು, ಅ.ನ.ಸಾ.ರಾ.ಗ್ರಾ & ಪಂ.ರಾಜ್ ಸಂಸ್ಥೆ, ಮೈಸೂರು.
11. ಎನ್.ಆರ್. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
12. ಗಗನ್.ಎ.ಎಸ್, ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
13. ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
14. ನವ್ಯ ಬಿ.ಎಸ್. Faculty(N&C), ಅ.ನ.ಸಾ.ರಾ.ಗ್ರಾ & ಪಂ.ರಾಜ್ ಸಂಸ್ಥೆ, ಮೈಸೂರು.

ನಿರ್ದೇಶಕರು(ಇ-ಆಡಳಿತ) ಇವರು ಸಭೆಯಲ್ಲಿ ಹಾಜರಿದ್ದ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್) ಹಾಗೂ ಸಭೆಯಲ್ಲಿ ಹಾಜರಿದ್ದ ತಾಂತ್ರಿಕ ಸಲಹಾ ಸಮಿತಿಯ ಸದಸ್ಯರುಗಳನ್ನು ಮತ್ತು ಎಲ್ಲಾ ಅಧಿಕಾರಿ/ಸಿಬ್ಬಂದಿಗಳನ್ನು ಸ್ವಾಗತಿಸಿದರು.

- ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ತಾಲ್ಲೂಕು ಪಂಚಾಯಿತಿ ಸಾಮರ್ಥ್ಯಸೌಧದ ಏಕಮುಖ ದೃಶ್ಯ ಮಾಧ್ಯಮ ಸ್ವೀಕೃತಿ ಕೇಂದ್ರಗಳನ್ನು ದ್ವಿಮುಖ ದೃಶ್ಯ ಮಾಧ್ಯಮವನ್ನಾಗಿ ಪರಿವರ್ತಿಸಲು ಪ್ರಾರಂಭಿಸಿರುವ ಟೆಂಡರ್ ಪ್ರಕ್ರಿಯೆಯನ್ನು ಮುಂದುವರೆಸುವ ಬಗ್ಗೆ ಸಭೆಯಲ್ಲಿ ಪ್ರಸ್ತಾಪಿಸಲಾಯಿತು.

ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯು ಇಸ್ರೋ ಸಹಯೋಗದೊಂದಿಗೆ 2002ರಲ್ಲಿ ರಾಜ್ಯದ 175 ತಾಲ್ಲೂಕು ಸಾಮರ್ಥ್ಯಸೌಧಗಳಲ್ಲಿ ಸ್ಥಾಪಿಸಿರುವ ಸ್ಯಾಟ್‌ಕಾಂ ಸ್ವೀಕೃತಿ ಕೇಂದ್ರಗಳ ಬಗ್ಗೆ ಮಾಹಿತಿಯನ್ನು ಬೋಧಕರು, ಅ.ನ.ಸಾ.ರಾ.ಗ್ರಾ & ಪಂ.ರಾಜ್ ಸಂಸ್ಥೆ ಇವರು ಸಭೆಯ ಗಮನಕ್ಕೆ ತಂದರು. ಹಾಲಿ ಈ ಸೌಲಭ್ಯವು ಏಕಮುಖ ದೃಶ್ಯ ಮಾಧ್ಯಮವಾಗಿದ್ದು, ಇದನ್ನು ದ್ವಿಮುಖ ದೃಶ್ಯ ಮಾಧ್ಯಮವನ್ನಾಗಿ ಬದಲಾಯಿಸಲು ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು ರೂ.4.45 ಕೋಟಿಗಳನ್ನು ಬಿಡುಗಡೆ ಮಾಡಿದ್ದು, ಇದಕ್ಕಾಗಿ ಸಂಸ್ಥೆಯು ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರೋರ್ಟಲ್‌ನಲ್ಲಿ ಅಳವಡಿಸಿ ಪ್ರಾರಂಭಿಸಿದ್ದು, ಸದರಿ ಟೆಂಡರ್‌ಗೆ 2 ಸಂಸ್ಥೆಗಳು ಆಸಕ್ತಿ ವಹಿಸಿದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು, ರಾಜ್ಯ ಸರ್ಕಾರದ ಸಿಆಸು(ಇ-ಆಡಳಿತ) ಇಲಾಖೆಯು ಕೇಸ್ವಾನ್ ಮುಖಾಂತರ ದ್ವಿಮುಖ ದೃಶ್ಯ ಮಾಧ್ಯಮ ಸೌಲಭ್ಯವನ್ನು ತಾಲ್ಲೂಕು ಪಂಚಾಯಿತಿಗಳ ಸಾಮರ್ಥ್ಯಸೌಧಗಳಲ್ಲಿ ಅಳವಡಿಸಲು ಒಪ್ಪಿಗೆ ನೀಡಿರುವುದು ಹಾಗೂ ಇದಕ್ಕೆ ತಗಲುವ ವೆಚ್ಚವನ್ನು ಸಿಆಸು(ಇ-ಆಡಳಿತ) ಇಲಾಖೆಯು ಭರಿಸಲು ಸಿದ್ಧವಿದೆಯೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಹಾಲಿ ಕರೆದಿರುವ ಟೆಂಡರ್ ಪ್ರಕ್ರಿಯೆಯನ್ನು ಮುಂದುವರೆಸುವ ಬಗ್ಗೆ ಚರ್ಚೆಗೆ ಹಾಗೂ ಸೂಕ್ತ ತೀರ್ಮಾನಕ್ಕೆ ವಿವರಗಳನ್ನು ಸಭೆಯಲ್ಲಿ ಮಂಡಿಸಲಾಯಿತು.

**ತೀರ್ಮಾನ:-** ಸಭೆಯ ಅಧ್ಯಕ್ಷರಾಗಿದ್ದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರು ಸಮಿತಿಯ ಸದಸ್ಯರುಗಳ ತಾಂತ್ರಿಕ ಸಲಹೆಗಳನ್ನು ಕೋರಿದರು. ಇ-ಆಡಳಿತ ಇಲಾಖೆಯ ಪ್ರೊಜೆಕ್ಟ್ ಡೈರೆಕ್ಟರ್ ಮಾತನಾಡಿ ತಾಲ್ಲೂಕು ಪಂಚಾಯಿತಿಗಳ ಸಾಮರ್ಥ್ಯ ಸೌಧಗಳಿಗೆ ದ್ವಿಮುಖ ದೃಶ್ಯ ಮಾಧ್ಯಮ ಸೌಲಭ್ಯವನ್ನು ನೀಡಲು ಇಲಾಖೆಯು ಸಿದ್ಧವಿರುವುದಾಗಿ ತಿಳಿಸಿದೆ. ಇಸ್ರೋ ಸಂಸ್ಥೆಯ ಪ್ರತಿನಿಧಿಗಳು ಸದರಿ ಪ್ರಕ್ರಿಯೆಗೆ ಸಹಮತ ವ್ಯಕ್ತಪಡಿಸಿ ಪ್ರಾರಂಭಿಕವಾಗಿ ಆಯ್ದ ಕೆಲವು ಕೇಂದ್ರಗಳಲ್ಲಿ ಇದನ್ನು ಅಳವಡಿಸಿ ಮುಂದಿನ ಕ್ರಮವಹಿಸಬಹುದೆಂದು ಸಲಹೆ ನೀಡಿದರು. ಪ್ರಧಾನ ಕಾರ್ಯದರ್ಶಿಗಳು ಇದಕ್ಕೆ ಸಹಮತ ವ್ಯಕ್ತಪಡಿಸಿ ರಾಜ್ಯದ 4 ಪ್ರಾದೇಶಿಕ ವಿಭಾಗಗಳ ಒಂದೊಂದು ತಾಲ್ಲೂಕಿನಲ್ಲಿ ಇದನ್ನು ಅಳವಡಿಸಿ ನಂತರ ಇತರೆ ಕೇಂದ್ರಗಳಲ್ಲಿ ಅಳವಡಿಸಬಹುದಾಗಿಯೆಂದು ಸೂಚಿಸಿದೆ. ಇತರೆ ಎಲ್ಲಾ ಸದಸ್ಯರು ಈ ಪ್ರಕ್ರಿಯೆಗೆ ಸಹಮತ ವ್ಯಕ್ತಪಡಿಸಿ ಹಾಲಿ ಚಾಲ್ತಿಯಲ್ಲಿರುವ ಟೆಂಡರ್ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಬಹುದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

- ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಸ್ವೀಕೃತಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಪಿಸುವ ಬಗ್ಗೆ.

ಬೋಧಕರು, ಅ.ನ.ಸಾ.ರಾ.ಗ್ರಾ & ಪಂ.ರಾಜ್ ಸಂಸ್ಥೆ ಇವರು ಸಂಸ್ಥೆಯ ಸ್ಯಾಟ್‌ಕಾಂ ಸ್ವೀಕೃತಿ ಕೇಂದ್ರಗಳು ಹಾಲಿ ತಾಲ್ಲೂಕು ಹಂತದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಗ್ರಾಮ ಪಂಚಾಯಿತಿಗಳ ಚುನಾಯಿತಿ ಪ್ರತಿನಿಧಿಗಳ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿಗಾಗಿ ಈ ಸ್ವೀಕೃತಿ ಕೇಂದ್ರಗಳನ್ನು ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಪಿಸುವ ಸಂಬಂಧ 2018-19 ನೇ ಸಾಲಿನ ಬಜೆಟ್ ಘೋಷಣೆ (ಬಜೆಟ್ ಕಂಡಿಕೆ ಸಂಖ್ಯೆ 280) ಯಂತೆ ಗ್ರಾಮ ಪಂಚಾಯತ್‌ಗಳಲ್ಲಿ ಉಪಗ್ರಹ ಸ್ವೀಕೃತಿ ಕೇಂದ್ರಗಳ ಸ್ಥಾಪನೆ ಬಗ್ಗೆ ನಿಗದಿಪಡಿಸಿದ ₹ 7.00 ಕೋಟಿ ಅನುದಾನವನ್ನು ಎ.ಎನ್.ಎಸ್.ಎಸ್.ಐ.ಆರ್.ಡಿ & ಪಂ.ರಾಜ್ ರವರಿಗೆ ಬಿಡುಗಡೆ ಮಾಡಲಾಗಿದೆ ಎಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಇದಕ್ಕೆ ಸಂಬಂದಿಸಿದಂತೆ ಸಂಸ್ಥೆಯ ಪ್ರತಿನಿಧಿಗಳು ಬೆಂಗಳೂರಿನ ಇಸ್ರೋ ಕೇಂದ್ರಕ್ಕೆ ಭೇಟಿ ನೀಡಿ ವಿವರವಾದ ಚರ್ಚೆಗಳನ್ನು ನಡೆಸಿದ ಸಂದರ್ಭದಲ್ಲಿ ಹಾಲಿ ಬಳಸಲಾಗುತ್ತಿರುವ ಸಿ ಬ್ಯಾಂಡ್ ಸೌಲಭ್ಯವು ಹಳೆಯದಾಗಿದ್ದು, ಇದಕ್ಕೆ ಬದಲಾಗಿ ರಾಷ್ಟ್ರ ಮಟ್ಟದಲ್ಲಿ ಕೆಯು ಬ್ಯಾಂಡ್ ಸೌಲಭ್ಯವನ್ನು ಬಳಸಿ ಸ್ವೀಕೃತ ಕೇಂದ್ರಗಳನ್ನು ಸ್ಥಾಪಿಸಬಹುದೆಂದು ಸಲಹೆ ನೀಡಿರುತ್ತಾರೆಂಬ ಅಂಶವನ್ನು ಸಭೆಯ ಗಮನಕ್ಕೆ ತಂದರು. ಮುಂದುವರೆದು, ಇಸ್ರೋ ಸಂಸ್ಥೆಯು ರಾಷ್ಟ್ರೀಯ ಸ್ಯಾಟ್‌ಲೈಟ್ ನೆಟ್‌ವರ್ಕ್ ಸ್ಥಾಪಿಸಲು ಕ್ರಮವಹಿಸುತ್ತಿದ್ದು, ಹಾಲಿ ಇರುವ ಭೂಕೇಂದ್ರಗಳನ್ನು ಸಹ ಉನ್ನತೀಕರಿಸಿ ಕೆಯು ಬ್ಯಾಂಡ್ ಮುಖಾಂತರ ಭೂಕೇಂದ್ರ ಹಾಗೂ ಸ್ವೀಕೃತಿ ಕೇಂದ್ರಗಳನ್ನು ನಿರ್ವಹಿಸುವುದರ ಬಗ್ಗೆ ಸಲಹೆ ನೀಡಿರುತ್ತಾರೆ. ರಾಷ್ಟ್ರೀಯ ಸ್ಯಾಟ್‌ಲೈಟ್ ನೆಟ್‌ವರ್ಕ್ ಪ್ರಾರಂಭಿಸಿದ ನಂತರ ರಾಜ್ಯಗಳು ಪ್ರತ್ಯೇಕವಾಗಿ ಭೂಕೇಂದ್ರವನ್ನು ನಿರ್ವಹಿಸುವ ಅವಶ್ಯಕತೆಯಿರುವುದಿಲ್ಲ ಎಂಬ ಅಂಶವನ್ನು ಸಹ ಇಸ್ರೋ ಸಂಸ್ಥೆಯು ತಿಳಿಸಿರುತ್ತದೆ. ಪ್ರಸ್ತುತ ರಾಜ್ಯದಲ್ಲಿ ಶಿಕ್ಷಣ ಇಲಾಖೆಯು ಸ್ಯಾಟ್‌ಕಾಂ ಸ್ಟುಡಿಯೋ ನಿರ್ವಹಿಸುತ್ತಿದ್ದು, ಈ ಸೌಲಭ್ಯವನ್ನು ಕೆಯು ಬ್ಯಾಂಡ್ ಮುಖಾಂತರ ನೀಡಲಾಗಿದ್ದು ಇವುಗಳನ್ನೇ ಬಳಸಿ ಸಂಸ್ಥೆಯು ಗ್ರಾಮ ಪಂಚಾಯಿತಿಯ ಹಂತದಲ್ಲಿ ಸ್ವೀಕೃತಿ ಕೇಂದ್ರಗಳನ್ನು ಸ್ಥಾಪಿಸಬಹುದೆಂದು ಇಸ್ರೋ ಸಲಹೆಗಳನ್ನು ಸಭೆಯ ಗಮನಕ್ಕೆ ತಂದರು. ಪ್ರೊಜೆಕ್ಟ್ ಡೈರೆಕ್ಟರ್, ಇ-ಆಡಳಿತ ಇಲಾಖೆಯ ಪ್ರತಿನಿಧಿಗಳು ರಾಜ್ಯದಲ್ಲಿ ಈಗಾಗಲೇ 1000 ಗ್ರಾಮ ಪಂಚಾಯಿತಿಗಳಲ್ಲಿ ದ್ವಿಮುಖ ದೃಶ್ಯ ಮಾಧ್ಯಮದ ಮುಖಾಂತರ ಈ ಸೌಲಭ್ಯವನ್ನು ನೀಡಲು ಕ್ರಮವಹಿಸಿದೆ ಎಂದು ಹಾಗೂ ಜೂನ್ ಅಂತ್ಯದೊಳಗೆ ಈ ಕೇಂದ್ರಗಳು ಕಾರ್ಯನಿರ್ವಹಿಸುತ್ತದೆಂಬ ಮಾಹಿತಿಯನ್ನು ಸಭೆಯ ಗಮನಕ್ಕೆ ತಂದರು.

**ತೀರ್ಮಾನ:-** ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ರಾಷ್ಟ್ರೀಯ ಸ್ಯಾಟ್‌ಲೈಟ್ ನೆಟ್‌ವರ್ಕ್‌ಗೆ ಸಂಬಂಧಿಸಿದಂತೆ, ಸರ್ಕಾರದ ವತಿಯಿಂದ ಪತ್ರವನ್ನು ಇಸ್ರೋ ಸಂಸ್ಥೆಗೆ ಬರೆದು ವಿವರಗಳನ್ನು ಸಲ್ಲಿಸುವಂತೆ ಕೋರಲು ಸಂಸ್ಥೆಗೆ ಸಲಹೆ ನೀಡಿದರು. ಇದೇ ರೀತಿ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಿಗೆ ಪತ್ರ ಬರೆದು ಇಲಾಖೆಯು ಬಳಸುತ್ತಿರುವ ಸ್ಟುಡಿಯೋವನ್ನು ಬಳಸುವ ಸಂಬಂಧ ಮಾಹಿತಿ ಕೋರುವಂತೆ ಸಲಹೆ ನೀಡಿದರು. ಇ-ಆಡಳಿತ ಇಲಾಖೆಯ ಸದಸ್ಯರು ಗ್ರಾಮ ಪಂಚಾಯಿತಿಗಳಲ್ಲಿ ಸ್ಥಾಪಿಸಿರುವ ದ್ವಿಮುಖ ದೃಶ್ಯ ಮಾಧ್ಯಮ ಸೌಲಭ್ಯದ ಬಗ್ಗೆ ನೀಡಿದ ವಿವರಗಳನ್ನು ಸಭೆಯಲ್ಲಿ ಪರಿಶೀಲಿಸಲಾಯಿತು. ಪ್ರಧಾನ ಕಾರ್ಯದರ್ಶಿಗಳು (ಪಂಚಾಯತ್ ರಾಜ್) ಚರ್ಚೆಯಲ್ಲಿ ಭಾಗವಹಿಸಿ ಸಂಸ್ಥೆಯ ಸ್ಯಾಟ್‌ಕಾಂ ಸೌಲಭ್ಯವನ್ನು ಇಸ್ರೋ ನೀಡುವ ಸಲಹೆಯನ್ವಯ ವಿಸ್ತರಿಸಲು ಅನುಮೋದಿಸಬಹುದೆಂದು ಸೂಚಿಸಿದರು. ಇಸ್ರೋ ಸಂಸ್ಥೆಯ ಪ್ರತಿನಿಧಿಗಳು ಸಿ ಬ್ಯಾಂಡ್ ಹಾಗೂ ಕೆಯು ಬ್ಯಾಂಡ್ ಸೌಲಭ್ಯಗಳ ಬಗ್ಗೆ ಹೆಚ್ಚಿನ ಮಾಹಿತಿ ಪಡೆದು ಮುಂದುವರೆಯಬಹುದೆಂದು ಸಲಹೆ ನೀಡಿದರು. ವಿವರವಾದ ಚರ್ಚೆಯ ನಂತರ ಇಸ್ರೋ ಸಂಸ್ಥೆಯು ನೀಡುವ ಸಲಹೆಗಳನ್ನು ಗಮನದಲ್ಲಿರಿಸಿಕೊಂಡು ಗ್ರಾಮ ಪಂಚಾಯಿತಿಗಳಲ್ಲಿ ಸ್ಯಾಟ್‌ಕಾಂ ಸ್ವೀಕೃತಿ ಕೇಂದ್ರಗಳನ್ನು ರಾಜ್ಯ ಸರ್ಕಾರವು ನೀಡಿರುವ ಅನುದಾನದಿಂದ ಸ್ಥಾಪಿಸಲು ಸರ್ವಾನುಮತದಿಂದ ಅನುಮೋದನೆ ನೀಡಲಾಯಿತು.

- 2019-20ನೇ ಸಾಲಿನ ಆಯವ್ಯಯ ಘೋಷಣೆಯಂತೆ (ಬಜೆಟ್ ಪ್ಯಾರಾ ಸಂಖ್ಯೆ:222) ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ಆಸ್ತಿಗಳನ್ನು ಡಿಜಿಟಲೀಕರಣಗೊಳಿಸಿ, ತೆರಿಗೆ ವ್ಯಾಪ್ತಿಯಿಂದ ಹೊರಗೆ ಉಳಿದ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸುವ ಬಗ್ಗೆ ಕ್ರಮವಹಿಸಬೇಕಾಗಿರುತ್ತದೆ. ದಿನಾಂಕ:21.03.2019 ರಂದು ಜರುಗಿದ ಸಭೆಯಲ್ಲಿ ತೀರ್ಮಾನಿಸಿದಂತೆ ಈ ಬಗ್ಗೆ 2019-20ನೇ ಸಾಲಿಗೆ ಪ್ರಾಯೋಗಿಕವಾಗಿ ಬೆಂಗಳೂರು ನಗರ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತಿಗಳಲ್ಲಿ ಸದರಿ ಯೋಜನೆಯನ್ನು ಅನುಷ್ಠಾನ ಮಾಡಬೇಕಾಗಿರುತ್ತದೆ. ಸದರಿ ಜಿಲ್ಲೆಯ ಗ್ರಾಮ ಪಂಚಾಯತಿಗಳ ಆಸ್ತಿಗಳ ಡಿಜಿಟಲೀಕರಣ ಮಾಡಲು TAB ಗಳ ಅವಶ್ಯಕತೆ ಇರುತ್ತದೆ. ಸದರಿ TAB ಗಳ ಅಳತೆಗೋಲುಗಳನ್ನು(Specifications and Configuration) ಸಭೆಯಲ್ಲಿ ಮಂಡಿಸಲಾಯಿತು. **ಅನುಬಂಧ-1** ರಲ್ಲಿ ನಮೂದಿಸಿದಂತೆ ಟ್ಯಾಬ್‌ಗಳ ಅಳತೆಗೋಲುಗಳನ್ನು (Specifications and Configuration) ಸಭೆಯಲ್ಲಿ ಅನುಮೋದಿಸಲಾಯಿತು.
- 2017-18ನೇ ಸಾಲಿನ ಆಯವ್ಯಯದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಗಣಕೀಕರಣ ಲೆಕ್ಕಶೀರ್ಷಿಕೆ:2515-00-101-0-24-059 ರಡಿ ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆಯ ಗಣಕೀಕರಣ ವ್ಯವಸ್ಥೆಯನ್ನು ಉನ್ನತೀಕರಣಗೊಳಿಸಲು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ/35/ಗ.ಕೋಶ/2017, ಬೆಂಗಳೂರು ದಿನಾಂಕ:06.02.2018ರಂತೆ ₹ 1.00 ಕೋಟಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಬಿಡುಗಡೆಗೊಳಿಸಿದ ಅನುದಾನದಲ್ಲಿ ಸಂಸ್ಥೆಯ ಗಣಕೀಕರಣಕ್ಕಾಗಿ ಕಂಪ್ಯೂಟರ್ ಪರಿಕರಗಳು, ಪ್ರಿಂಟರ್/ಸ್ಕ್ಯಾನರ್‌ಗಳನ್ನು ಖರೀದಿಸುವ ಸಲುವಾಗಿ Specifications and Configuration ಗಳನ್ನು ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ಮಂಡಿಸಲಾಯಿತು.

ಸಭೆಯ ನಿರ್ಣಯದಂತೆ ಸಂಸ್ಥೆಯ ಗಣಕೀಕರಣಕ್ಕೆ ಅವಶ್ಯವಿರುವ ;

1. ಅನುಬಂಧ-2: Specification for Laptop ಗೆ ಸಂಬಂಧಿಸಿದಂತೆ
2. ಅನುಬಂಧ-3: Specification for Multi Functional Printer-Color ಗೆ ಸಂಬಂಧಿಸಿದಂತೆ
3. ಅನುಬಂಧ-4: Specifications for Computer-Desktop ಗೆ ಸಂಬಂಧಿಸಿದಂತೆ
4. ಅನುಬಂಧ-5: Specifications for Normal Printers ಗೆ ಸಂಬಂಧಿಸಿದಂತೆ
5. ಅನುಬಂಧ-6: Multi Functional Printers/Scanners ಗೆ ಸಂಬಂಧಿಸಿದಂತೆ

ನಿಗದಿಪಡಿಸಿರುವ ಅಳತೆಗೋಲು/ಮಾನದಂಡಗಳನ್ನು(Specifications and Configuration) ಪರಿಗಣಿಸಿ ಅವಶ್ಯಕತೆಗನುಗುಣವಾಗಿ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಅವುಗಳ ಖರೀದಿಗೆ ಕ್ರಮವಹಿಸುವಂತೆ ಸಭೆಯಲ್ಲಿ ಅನುಮೋದಿಸಲಾಯಿತು.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ/30/ಗ.ಕೋಶ/2018
ದಿನಾಂಕ:01.06.2019.

(ಎಲ್.ಕೆ. ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ
ಅಧ್ಯಕ್ಷರು, ತಾಂತ್ರಿಕ ಸಲಹಾ ಸಮಿತಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ನಿರ್ದೇಶಕರು(ಪಂ.ರಾಜ್-2), ಗ್ರಾಅಪ ಇಲಾಖೆ, ಬೆಂಗಳೂರು.
2. ರಾಜ್ಯ ಮಾಹಿತಿ ತಂತ್ರಜ್ಞಾನ ಅಧಿಕಾರಿ, ಎನ್.ಐ.ಸಿ, ಬೆಂಗಳೂರು.
3. ಪ್ರೊ॥ ರಾಜಗೋಪಾಲನ್, IIST, ಬೆಂಗಳೂರು.
4. ಶ್ರೀ ವೇಣುಗೋಪಾಲ್, ವಿಜ್ಞಾನಿ, D.R.D.O.
5. ಶ್ರೀ ಎಸ್. ರಾಮನಾಥನ್, ವಿಜ್ಞಾನಿ, ISRO Satellite Centre.
6. ಶ್ರೀ ಕೆ. ಗುರುರಾಜರಾವ್, ನೋಡಲ್ ಅಧಿಕಾರಿ, ಯೋಜನಾ ಇಲಾಖೆ, ಬೆಂಗಳೂರು.
7. ಶ್ರೀಮತಿ ವಿದ್ಯಾ H.Pai, S.O, (exp-6), ನೋಡಲ್ ಅಧಿಕಾರಿ, ಆರ್ಥಿಕ ಇಲಾಖೆ.
8. ನೋಡಲ್ ಅಧಿಕಾರಿ, ಇ-ಆಡಳಿತ(ಸಿಆಸು) ಇಲಾಖೆ, ಬೆಂಗಳೂರು.
9. ಶ್ರೀ ಜಿ.ಕೆ.ಸುತಾರ್, ಪ್ರೊಜೆಕ್ಟ್ ಡೈರೆಕ್ಟರ್, S.D.C, ಸಿಆಸು (ಇ-ಆಡಳಿತ) ಇಲಾಖೆ.
10. ಡಾ॥ ಜಿ.ಎಸ್. ಗಣೇಶ್ ಪ್ರಸಾದ್, ಬೋಧಕರು, ಅ.ನ.ಸಾ.ರಾ.ಗ್ರಾ & ಪಂ.ರಾಜ್ ಸಂಸ್ಥೆ, ಮೈಸೂರು.
11. ಶ್ರೀ ಎನ್.ಆರ್. ಸಮರ್ಥರಾಮ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
12. ಸಹಾಯಕ ನಿರ್ದೇಶಕರು(ಇ-ಆಡಳಿತ), ಗ್ರಾಅಪ ಇಲಾಖೆ, ಬೆಂಗಳೂರು.
13. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.
14. ನವ್ಯ ಬಿ.ಎಸ್. Faculty(N&C), ಅ.ನ.ಸಾ.ರಾ.ಗ್ರಾ & ಪಂ.ರಾಜ್ ಸಂಸ್ಥೆ, ಮೈಸೂರು

**ಪ್ರತಿ:**

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.

# Annexure-1

## Tab Specification

| Sl.No | Specification |
|---|---|
| 1. | Processor- 1.0 GHz Dual Core or above |
| 2. | RAM- 2 GB or above |
| 3. | Internal Storage- 32GB or above |
| 4. | Expandable storage through micro SD, minimum 16 GB |
| 5. | USB Port- Minimum one Micro USB port and an optional additional USB Port |
| 6. | Rear Camera with Auto focus & 5 Mega Pixel resolutions or above, LED Flash |
| 7. | 9"Capacitive touch screen and 1280 X 800 pixel resolution or above |
| 8. | Scratch resistant front screen |
| 9. | GSM SIM card slot |
| 10. | Min. Battery backup up to 120 minutes, with minimum 3200 mAh battery. |
| 11. | SAR values within acceptable range |
| 12. | Separate charging port with AC adapter 110-240 volt range |
| 13. | Micro USB host cable |
| 14. | GPS and AGPS facility for capturing the location coordinates |
| 15. | Connectivity Requirements |
| 16. | (a) • Mandatory Edge/3G/4G-LTE mobile data support |
| | (b) • Wi-Fi IEEE 802.11b/g/n |
| 17. | Software Requirements for development support |
| | (a) • Android 6 Operating System or Above |
| | (b) • Safety and other standards compliance – CE certification/ RoHS certification BIS IS 13252 & FCC certification |
| 18. | Warranty- 3 years Comprehensive on site |

Note: All indicated specifications are the minimum required specifications. Vendor may offer products with better/higher specifications.

ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# Annexure-2

## Laptop Specification

| Sl No. | Description | Specification |
|---|---|---|
| 1 | Processor | Intel Core i5-3720QM Processor (Quad core 2.6 GHz, 4 MB) or equivalent or higher |
| 2 | Chipset | OEM mother board supporting above mentioned processor |
| 3 | RAM | 8 GB DDR3 RAM expandable upto 16 GB |
| 4 | HDD | 1 TB SATA smart HDD with pre-failure alert |
| 5 | Graphics | Integrated Intel/AMD graphics-Integrated in processor or equivalent |
| 6 | Monitor | 14" antiglare color TFT display or higher |
| 7 | Ports | 3* USB ports (v2.0) at least one 3.0, 1*RJ45 connector for Ethernet, 1*DC-in, 2*Audio Jacks, Microphone-in/out, 1*VGA port HDMI port |
| 8 | Wireless Solution | Integrated WLAN **802.11** b/g/n |
| 9 | Card Reader | Integrated 4 in 1 card reader |
| 10 | Bluetooth | Integrated Bluetooth |
| 11 | Webcam | Integrated 1.3 Mega pixel or HD webcam or Higher |
| 12 | Ethernet | 10/100/1000 Mbps LAN |
| 13 | OS | Microsoft Windows 10 professional preloaded |
| 14 | Certification | Energy star 5.0/6.0, Windows 10, ISO 9001:2008 certificate for OEM |
| 15 | Battery | 4 hours or above |
| 16 | Software | Back Up and Recovery Software, MS Office, Nudi 4.0 or higher Kannada Software to be preloaded before delivery. |
| 17 | Antivirus | Norton or McAfee or e-Trust or e-Scan or Fore front or Trend Micro or PC tool or Quick heal Antivirus or equivalent (Latest Version) with 3 year license. M.S. Office |

| | | |
|---|---|---|
| 18 | Weight | < 2.5 kg including Battery |
| 19 | Warranty | 3years comprehensive onsite warranty (including batteries) |
| 19 | Carry case | Carry case should be provided. |

Note: All indicated specifications are the minimum required specifications. Vendor may offer products with better/higher specifications.

ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# Annexure-3

## Specification of Multi Functional Printer_Color

| | | |
|---|---|---|
| **Machine Type** | Colour Laser Multifunctional | |
| **Core functions** | Print, Copy, Scan, Send, Store and Optional Fax | |
| **Control Panel** | 5 inch TFT LCD WVGA Colour Touch panel | |
| **Memory** | Standard: 2.0GB RAM | |
| **Interface Connection** | NETWORK | Standard: 1000Base-T / 100Base-TX / 10Base-T, Wireless LAN (IEEE 802.11 b/g/n); Optional: NFC |
| | OTHERS | Standard: USB 2.0 (Host) x2, USB 2.0 (Device) x1; Optional: Copy Control Interface |
| **Paper Capacity (A4, 80/m²)** | Standard: | 1,200 Sheets |
| | Maximum: | 2,300 Sheets |
| **Paper Source (A4, 80/m²)** | Standard: | Two 550-sheet paper cassettes |
| | | 100-sheets Multi Purpose Tray |
| | Optional: | Dual 550-sheet paper cassettes (CASSETTE FEEDING UNIT-AP1) |
| | Maximum: | 2,300 Sheets |
| **Paper output capacity (A4, 80/m²)** | Standard: | 250 Sheets |
| | With Inner Finisher: | 600 sheets *INNER FINISHER-K1 |
| **Finishing capabilities** | Standard: | Collate, Group |
| | With Inner Finisher: | Collate, Group, Offset, Staple, Staple-Free Staple, Staple-on-Demand |
| **Supported media sizes** | Cassette 1: | Standard size: A4, B5, A5R |
| | | Envelopes: ISO-C5 |
| | | Custom Size: 139.7 x 182mm to 297 x 215.9mm |
| | Cassette 2: | Standard size: A3, B4, A4, B5, A4R, A5R |
| | | Envelopes: No.10 (COM10), Monarch, DL |

| | | |
|---|---|---|
| | | Custom Size: 139.7 x 182mm to 304.8 x 457.2mm |
| | Cassete 3/4 (CASSETTE FEEDING UNIT-AP1): | Standard size: A3, B4, A4, A4R, B5R, B5, A5R |
| | | Custom Size: 139.7 x 182mm to 304.8 x 457.2mm |
| | Multi-purpose tray: | Standard size: A3, B4, A4, A4R, B5R, B5, A5, A5R, SRA3 |
| | | Custom size: 98.4 x 139.7mm to 320 x 457.2mm |
| | | Envelopes: No.10 (COM10), Monarch, ISO-C5, DL |
| **Warm-up Time** | From Power On: | 30 Seconds or Less |
| | From Sleep Mode: | 10 Seconds or Less |
| **Toner (Estimated Yield @ 5% Coverage)** | Black: 36,000 | |
| | Colour: 19,000 | |
| **Print Specifications** | | |
| **Printing method** | Colour Laser Beam Printing | |
| **Print Speed (BW/CL)** | 20ppm (A4), 15ppm (A3) | |
| **Print Resolution** | 600 x 600dpi, 1200 x 1200dpi | |
| **Double Sided Printing** | Automatic (Standard) | |
| **Direct Print** | Direct printing available from USB memory key | |
| | Supported file types: TIFF, JPEG, PDF and XPS. | |
| **Operating System** | UFRII: | Windows Vista / Server 2008 / Windows 7 / Server 2008 R2 / Windows 8 / Server 2012 / Windows 8.1 / Server 2012 R2 / Windows 10 / Server 2016, MAC OS X (10.7.5 or later), Linux |
| | PCL: | Windows Vista / Server 2008 / Windows 7 / Server 2008 R2 / Windows 8 / Server 2012 / Windows 8.1 / Server 2012 R2 / Windows 10 / Server 2016 |
| | PS: | Windows Vista / Server 2008 / Windows 7 / Server 2008 R2 / Windows 8 / Server 2012 / Windows 8.1 / Server 2012 R2 / Windows 10 / Server 2016, MAC OS X (10.7.5 or later) |

| | | |
|---|---|---|
| | PPD: | MAC OS 9.1 or later, MAC OS X (10.3.9 or later), Windows Vista / Windows 7 / Windows 8 / Windows10 |
| **Copy Specifications** | | |
| **Copy Speed (BW/CL)** | 35ppm (A4) 22ppm (A3) | |
| **First-Copy-Out Time (BW/CL)** | Approx. 5.9 / 8.2 seconds or less | |
| **Copy resolution** | Reading: 600 x 600dpi | |
| **Multiple Copies** | Up to 999 copies | |
| **Copy Exposure** | Automatic or Manual (11 Levels) | |
| **Magnification** | 25 - 400% (1% Increments) | |
| **Scan Specifications** | | |
| **Type** | Colour Platen and Duplexing Automatic Document Feeder | |
| **Supported media size/s** | A3, B4, A4R, A4, B5R, B5, A5R, A5, B6 | |
| **Scan Resolution** | 300 x 300dpi, 600 x 600dpi | |
| **Document Feeder Paper Capacity** | 100 Sheets (80g/m$^2$) | |
| **Double sided scanning** | 2-sided to 2-sided (Automatic) | |
| **Power source** | 220 - 240V (±10%), 50 / 60Hz (±2Hz), 4.0 Amp | |
| **Power consumption** | Maximum: | Approx. 1.5kW |
| | Standby: | Approx. 33.6W* |
| | Sleep mode: | Approx. 2W (Wireless LAN power save mode:OFF), 1W (Wireless LAN power save mode:ON) |

Note: All indicated specifications are the minimum required specifications. Vendor may offer products with better/higher specifications.

ನಿರ್ದೇಶಕರು (ಇ-ಆಡಳಿತ) ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

Annexure-4

# Specifications for Computers-Desktop

| Feature | Specification |
|---|---|
| Processor | Latest generation of Intel Core i5 8th Generation (Quad core 3.0 GHz, 6MB cache) or AMD equivalent Or Higher. |
| Chipset | OEM chipset supporting above mentioned processor |
| Motherboard | OEM mother board supporting above mentioned processor |
| Memory | 8 GB, 1333 MHz DDR3 RAM with 16 GB Expandability |
| Hard Disk Drive & Controller | 1 TB 7200 RPM with pre failure alerts |
| Optical Drive | DVD writer |
| Graphics | Intel HD Graphics or AMD any equivalent graphics integrated to Processor |
| Ethernet | Integrated Gigabit Network Connection 10/100/1000 |
| Bays | 3 nos or above |
| Slots | Minimum 3 Slots |
| Ports | 6 USB ports with at least 2 in front, audio ports for microphone and headphone in front |
| Form Factor | Small Form Factor .0 |
| Power Supply | Minimum 250-watt power supply |
| Monitor | 21" LED monitor or larger colour monitor |
| Keyboard | 104 keys or better |
| Mouse | PS/2 or USB 2 button optical scroll mouse |
| Software | Back Up and Recovery Software, MS Office, Nudi 4.0 or higher Kannada Software to be preloaded before delivery. |
| Operating Systems | Microsoft Windows 10 Professional preloaded with recovery media |
| Preloaded Software | Norton or McAfee or a Trust or e-Scan or Fore front or Trend Micro or PC Tool or Quick heal Antivirus(Latest Version) 3 years license |
| Compliance & Certification | Windows 10OS &other relevant certificates |
| Warranty | 3 years Comprehensive on site |

Note: All indicated specifications are the minimum required specifications. Vendor may offer products with better/higher specifications.

ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# Annexure-5

## Specifications for Normal Printers

| | |
|---|---|
| Print Colours | No |
| Functions | Print, Copy, Scan |
| Display | Touch Screen/Tilting Display |
| Print and Copy Speed | 20 Pages per Minute (A4) |
| | 10 Pages per Minute (A3) |
| Duplex Printing | Yes |
| First Copy out | Approximately 8 seconds |
| Warm-Up Time | Approximately 20 seconds |
| Paper Capacity | Standard 350 Sheets/ max 500 Sheets |
| Power Source | 220 Volts, 50/60 Hz, 12 amps |
| Interface | High Speed USB 2.0, WLAN* (IEEE802.11b/g), Bluetooth* |
| Max Original Size | A3/A4 |
| Max Duty Cycle | Up to 8000 pages |

### Print

| | |
|---|---|
| Resolution | Minimum 600*600 dpi |
| Supported Systems | Windows 2000, Windows Vista/XP/Server, 2008/Server 2003 (32/64 bit), Mac OS X, Linux/Unix, Novel NetWare, Citrix, SAP, AS/400 |

### Scan

| | |
|---|---|
| Resolution | Maximum: 600 x 600 dpi, colour (8 Bit) or mono |
| Scan Speed | Up to 20/17 (mono/colour) sheets per minute (300 dpi) |
| Scan Modes | Auto-Colour, Colour, Greyscale, Black and White |
| File Formats | JPEG, Multi/Single Page TIFF/XPS/PDF, Slim PDF, Secure PDF, Searchable PDF* (and other editable formats like DOC, XLS, RTF, TXT)* |

### Copy

| | |
|---|---|
| Resolution | Up to 400 * 600 dpi |
| Reproduction Ratio | 25-100% |
| Copy Modes | Text, Text/Photo, Photo, Colour Document |
| Warranty | 1 Year Warranty |

Note: All indicated specifications are the minimum required specifications. Vendor may offer products with better/higher specifications.

ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನಿ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

# Annexure-6

## Specifications for Multi Functional Printers/Scanners

| | |
|---|---|
| Copy System | Indirect Electrostatic photographic method/OPC/LED Printing/Heat |
| Display | Touch Screen Tilting Display |
| Print and Copy Speed | 45 Pages per Minute (A4) |
| | 25 Pages per Minute (A3) |
| First Copy out | Approximately 3.8 seconds |
| Warm-Up Time | Approximately 30 seconds |
| Paper Size and Weight | Cassettes: A5R-A3, 64-105 g/$m^2$ |
| | Large Capacity Feeder*: A4, 64-105 g/$m^2$ |
| | Bypass: A5R-A3, 52-209 g/$m^2$ |
| Paper Capacity | Standard 350 Sheets/ max 2,900 Sheets |
| Power Source | 220 Volts, 50/60 Hz, 12 amps |
| Memory | 60 GB Hard Disk Drive / 1 GB RAM or More |
| Interface | High Speed USB 2.0, WLAN* (IEEE802.11b/g), Bluetooth* |
| Max Original Size | A3/A4 |
| Max Duty Cycle | Max 90 K per month |

**Print**

| | |
|---|---|
| Resolution | Minimum 1200*600 dpi |
| Supported Systems | Windows 2000, Windows Vista/XP/Server, 2008/Server 2003 (32/64 bit), Mac OS X, Linux/Unix, Novel NetWare, Citrix, SAP, AS/400 |

**Scan**

| | |
|---|---|
| Resolution | Maximum: 600 x 600 dpi, colour (8 Bit) or mono |
| Scan Speed | Up to 57/43 (mono/colour) sheets per minute (300 dpi) |
| Scan Modes | Auto-Colour, Colour, Greyscale, Black and White |
| File Formats | JPEG, Multi/Single Page TIFF/XPS/PDF, Slim PDF, Secure PDF, Searchable PDF* (and other editable formats like DOC, XLS, RTF, TXT)* |

**Copy**

| | |
|---|---|
| Resolution | Scan: 2,400 x 600 dpi with smoothing |
| First copy | Approximately 74.7 seconds |
| Reproduction Ratio | 25-400% |
| Copy Modes | Text, Text/Photo, Photo, Colour Document, Custom |
| Warranty | 1 Year Warranty |

Note: All indicated specifications are the minimum required specifications. Vendor may offer products with better/higher specifications.

ನಿರ್ದೇಶಕರು (ಇ-ಆಡಳಿತ) ಹಾಗೂ
ಪ/ನ ಸರ್ಕಾರದ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ